# SAMPLE PAPER FOR SUMMATIVE ASSESSMENT - II <u>SET II</u>
## SECOND TERM

**SUB : KANNADA** **CLASS – X** **M.MARKS: 80** **TIME: 3 Hrs**

---

***ಸೂಚನೆಗಳು :*** *1. ಈ ಪ್ರಶ್ನೆ ಪತ್ರಿಕೆಯು ಎ,ಬಿ,ಸಿ, ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.*

- *ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು*
- *ವಿಭಾಗ–B (ಬರವಣಿಗೆ ಕೌಶಲ) : 14 ಅಂಕಗಳು*
- *ವಿಭಾಗ–C (ಅನ್ವಯಿಕ ವ್ಯಾಕರಣ) : 14 ಅಂಕಗಳು*
- *ವಿಭಾಗ–D (ಪಠ್ಯಗಳ ಅಧ್ಯಯನ) : 40 ಅಂಕಗಳು*

- **<u>ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : (*12 ಅಂಕಗಳು*)</u>**

1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅಭಿವೃದ್ಧಿ ಪಥದಲ್ಲಿ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಅಗ್ರವಾಗಿರುವ ಭಾರತಕ್ಕೆ 'ಶಿಕ್ಷಣದ ಸಾರ್ವತ್ರೀಕರಣ' ಅಗತ್ಯವಾಗಿದೆ. ಆದರೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನಾನಾ ಭಾಷೆ ಮತ್ತು ಸಂಸ್ಕೃತಿಗಳನ್ನೊಳಗೊಂಡ ವಿಶಾಲವಾದ ನಮ್ಮ ದೇಶದ ಪ್ರತಿಯೊಂದು ಗ್ರಾಮಾಂತರ ಪ್ರದೇಶಕ್ಕೆ ಒದಗಿಸುವುದು ಅತ್ಯಂತ ಕಷ್ಟಕರವಾದ ಕಾರ್ಯವಾಗಿದೆ.

ಆದರೂ ಈ ಸಮಸ್ಯೆಯ ಪರಿಹಾರಕ್ಕೆ ಉಪಗ್ರಹಗಳನ್ನಾಧರಿಸಿದ ಶಿಕ್ಷಣದ ಪ್ರಯೋಗಗಳು ಉತ್ತೇಜನ ನೀಡಿವೆ. ಇತ್ತೀಚಿಗೆ ಶಿಕ್ಷಣಕ್ಕಾಗಿಯೇ ಮುಡುಪಾಗಿರುವ 'ಎಜುಸ್ಯಾಟ್'ಎಂಬ ಉಪಗ್ರಹವನ್ನು ಯಶಸ್ವಿಯಾಗಿ ಹಾರಿ ಬಿಡಲಾಗಿದೆ. ಇಡೀ ದೇಶದ ಎಲ್ಲಾ ಭಾಗಗಳಿಗೂ ತಂತ್ರಜ್ಞಾನದ ಮುಖಾಂತರ ವಿಚಾರ–ವಿನಿಮಯ ಹಾಗೂ ಸಂಪರ್ಕಗಳನ್ನೊಳಗೊಂಡ ಶೈಕ್ಷಣಿಕ ಪ್ರಸಾರ ಮತ್ತು ಸೇವೆಯನ್ನು ಒದಗಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ಧೇಶವಾಗಿದೆ.ಇದರಿಂದಾಗಿ ನಾವಿಂದು ಇಡೀ ದೇಶದಲ್ಲಿ ಶಿಕ್ಷಣ ಪ್ರಸಾರದ ಕ್ರಾಂತಿಯನ್ನು ಸಾಧಿಸುತ್ತ ದಾಪುಗಾಲು ಇಟ್ಟಿದ್ದೇವೆ. ಉತ್ತಮ ಶಿಕ್ಷಕರು ನಡೆಸಿಕೊಡುವ ತರಗತಿಯ ಪಾಠಗಳನ್ನು ಎಲ್ಲಾ ಗ್ರಾಮಾಂತರ ಪ್ರದೇಶಗಳೂ ಸೇರಿದಂತೆ ಇಡೀ ದೇಶಕ್ಕೆ ಉಪಗ್ರಹಗಳಿಂದ ಪ್ರಸಾರ ಮಾಡಲಾಗುತ್ತಿದೆ. ಹೀಗಾಗಿ ಉಪಗ್ರಹ ಆಧಾರಿತ ದೂರ ಶಿಕ್ಷಣವು ವಿದ್ಯಾಪ್ರಸಾರಕ್ಕೆ ಒಂದು ವರವಾಗಿ ಪರಿಣಮಿಸಿದೆ.

ಪ್ರಶ್ನೆಗಳು :

ಅ) ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಭಾರತಕ್ಕೆ ಯಾವುದು ಅಗತ್ಯವಾಗಿದೆ ? 1

ಆ) ಭಾರತಕ್ಕೆ ಎದುರಾದ ಕಷ್ಟಕರವಾದ ಕಾರ್ಯ ಯಾವುದು ? 1

ಇ) 'ಎಜುಸ್ಯಾಟ್'ಕಾರ್ಯಕ್ರಮದ ಮುಖ್ಯ ಉದ್ಧೇಶವೇನು ? 2

ಈ) ಉಪಗ್ರಹ ಆಧಾರಿತ ದೂರ ಶಿಕ್ಷಣವು ವಿದ್ಯಾಪ್ರಸಾರಕ್ಕೆ ಹೇಗೆ ವರವಾಗಿ ಪರಿಣಮಿಸಿದೆ ? 2

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅಂದು..ಎರಡು ಸಾವಿರದ್ಯೈನೂರು ವರುಷಗಳ ಪೂರ್ವ
ಬುದ್ಧನೆಂಬವನಿದ್ದ ಮಹಾಪುರುಷನೋರ್ವ
ಸಿದ್ಧಾರ್ಥನೆಂಬುದವನ ಮೂಲ ಹೆಸರು
ಬೌದ್ಧ ಧರ್ಮಕೆ ಆದನವ ಉಸಿರು !

ಒಮ್ಮೆ..ಸತ್ತವನ ಹೆಣಕಂಡು ಮರುಗಿದನವ ಸಿದ್ಧಾರ್ಥ
ಮುಪ್ಪು ಮರಣಗಳುಂಟೆ ? ಏನವಕೆ ಅರ್ಥ ?
ಅದನು ತಿಳಿಯಲಿಕೆಂದೆ ಹೊರಟು ಬಿಟ್ಟವ ನೀತ
ಮಗ–ಮಡದಿ ರಾಜ್ಯಕೋಶವ ಬಿಟ್ಟನವನೀತ !

ಅಡವಿಯಲಿ ಅಲೆದಾಡಿ ಬಳಲಿದನು ಬೆಂಡಾಗಿ
ಕೊನೆಗೊಮ್ಮೆ ಬೆಳಕು ಕಂಡನವ ಭೋದಿ ವೃಕ್ಷದ ತಲದಿ
ಆಶೆಯೆಂಬುದೆ ಘನ ; ತೃಣಕಿಲ್ಲ ಸರಿಸಾಟಿ
ದಯೆಯು ಧರ್ಮದ ಮೂಲ ಬದುಕಿಗದು ಮೇಟ !

ಸಾಧನೆಯ ಮಾರ್ಗದಲಿ ಸಾಗಿ ಸಾಗಲು ಬುದ್ಧ
ಪ್ರೀತಿಯೆಂಬುದ ತೋರಿ, ತ್ಯಾಗದಿಂ ಜಗ ಗೆದ್ದ
ಮಾಯೆ ಮೋಹಗಳಲ್ಲಿ ನಾವಿರಲು ಬದ್ಧ
ಆಗಬಹುದೇ ಹೇಳಿ ! ಮನುಕುಲವು ಬುದ್ಧ !

– (ಆಗಬೇಕಿಂದು ಮನುಕುಲವು ಬುದ್ಧ)

ಸಂಗ್ರಹ : ಕಾವ್ಯ ಸಂಗಮ. ಕವಿ/ಸಂಪಾದಕ : ಮಹಾಲಿಂಗ ಯಾಳಗಿ.

ಪ್ರಶ್ನೆಗಳು :

ಅ) ಬುದ್ಧನ ಮೂಲ ಹೆಸರೇನು ? 1
ಆ) ಬುದ್ಧ ಏನನ್ನು ತಿಳಿಯಲು ಹೊರಟ ? 2
ಇ) ಬುದ್ಧನು ಬೆಳಕು ಕಂಡ ಬಗೆ ಹೇಗೆ ? 1
ಈ) ಬುದ್ಧ ಜಗವನ್ನು ಹೇಗೆ ಗೆದ್ದ ? 2

## <u>ವಿಭಾಗ–B (ಬರವಣಿಗೆ ಕೌಶಲ) : (*14 ಅಂಕಗಳು*)</u>

II. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ೧೫೦ ಪದಗಳಿಗೆ ಮೀರದಂತೆ ನಿಬಂಧ ಬರೆಯಿರಿ. 6

೧. ನನ್ನ ಮೆಚ್ಚಿನ ಸಾಹಿತಿ. ೨. ಪರಿಸರ ಮಾಲಿನ್ಯದ ನಿವಾರಣೋಪಾಯಗಳು. ೩. ಪತ್ರಿಕೆಗಳ ಮಹತ್ವ.

III. ದಿನಾಂಕ ೧೨–೨–೨೦೧೧ ರ ಪ್ರಜಾವಾಣಿ ದಿನ ಪತ್ರಿಕೆಯ ಜಾಹೀರಾತಿನ ಮೇರೆಗೆ ವಿವೇಕಾನಂದ ಪದವಿ ಪೂರ್ವ ಕಾಲೇಜು, ಮೈಸೂರು ಇಲ್ಲಿ ಖಾಲಿ ಇರುವ ಕನ್ನಡ ಉಪನ್ಯಾಸಕ ಹುದ್ದೆಗೆ ಅರ್ಜಿ ಸಲ್ಲಿಸಿರಿ. 4

ಅಥವಾ

ದ.ರಾ.ಬೇಂದ್ರೆಯವರ 'ನಾಕುತಂತಿ' ಕವನ ಸಂಕಲನವನ್ನು ಕಳುಹಿಸಿಕೊಡಲು ವಿನಂತಿಸಿಕೊಂಡು, ವ್ಯವಸ್ಥಾಪಕರು, ಸಮಾಜ ಪುಸ್ತಕ ಮಳಿಗೆ, ಧಾರವಾಡ ಇವರಿಗೊಂದು ಪತ್ರ ಬರೆಯಿರಿ.

IV. ನಿಮ್ಮ ಪ್ರದೇಶದಲ್ಲಿ ವಿಪರೀತ ಮಳೆಯಿಂದ ಉಂಟಾದ ಪರಿಸ್ಥಿತಿಯನ್ನು ವಿವರಿಸಿ ಒಂದು ವರದಿಯನ್ನು ತಯಾರಿಸಿ. 4

## <u>ವಿಭಾಗ–C (ವ್ಯಾಕರಣ) : (*14 ಅಂಕಗಳು*)</u>

V. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ 2
   ಮನೆಗೆಲಸ, ವಾಗ್ದೇವಿ.
2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ 2
   ಮುಂಜಾವು ಪೆರ್ಬಯಕೆ
3. 'ಕಣ್ಣಲ್ಲಿ ಕಣ್ಣಿಟ್ಟುನೋಡು'- ಈ ಪಡೆನುಡಿಯನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ. 1
4. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ 1
   ಆರೋಹಣ ಸುಖ
5. ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ ಬರೆಯಿರಿ. 1
   ರಾಮನಿಂ ಮನೆಯ
6. ಕೆಳಗಿನವುಗಳಿಗೆ ತತ್ಸಮ/ತದ್ಭವ ರೂಪ ಬರೆಯಿರಿ. 1
   ಮುಖ, ಗರತಿ
7. ಕೆಳಗಿನ ಪದಗಳಲ್ಲಿರುವ ಜೋಡುನುಡಿಯನ್ನು ಗುರುತಿಸಿ ಬರೆಯಿರಿ. 1
   ೧) ಥವಥವ ೨)ಸರಸರ ೩) ಮನೆಮಠ ೪).ಧಗಧಗ
8. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ. 1
   ಪಂಕ ಈಳೆ
9. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ. 1
   ೧. ಬಾಯಾಳು : ಬಳ್ಳು : : ದೀರ್ಘಕರ್ಣ=_______
   ೨. ಸ್ನೇಹ + ಅಭಿಮಾನ =ಸ್ನೇಹಾಭಿಮಾನ : : ಷಟ್ + ಮುಖ =_______

10. ಅವನು ಸುಮ್ಮನೆ ಊರೂರು ಸುತ್ತುತ್ತಾನೆ – ಇಲ್ಲಿರುವ ಸರ್ವನಾಮ ಗುರುತಿಸಿ ಬರೆಯಿರಿ. 1

೧). ಊರೂರು ೨). ಸುಮ್ಮನೆ ೩). ಅವನು ೪). ಸುತ್ತುತ್ತಾನೆ

11. ನಿಮಗೆ ಬೇಕಾದ ಒಂದು ಗಾದೆ ಮಾತನ್ನು ವಿವರಿಸಿ. 2

೧. ಅಡಿಕೆಗೆ ಹೋದ ಮಾನ ಆನೆ ಕೊಟ್ಟರು ಬಾರದು.

೨. ಕಬ್ಬು ಡೊಂಕಾದರೆ ಅದರ ಸಿಹಿ ಡೊಂಕೆ ?.

## ವಿಭಾಗ–D (ಪದ್ಯಗಳ ಅಧ್ಯಯನ) : (*40 ಅಂಕಗಳು*)

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 14

1) ಭಾಷೆ ಇದಕ್ಕೆ ಸಾಧನವಾಗಿದೆ.

೧) ವಿಚಾರವಿನಿಮಯಕ್ಕೆ ೨) ಓದುವುದಕ್ಕೆ ೩) ಬರೆಯುವುದಕ್ಕೆ ೪) ಜ್ಞಾನಕ್ಕೆ

2) ಬುದ್ಧ ಇವನನ್ನು ಅರಸುತ್ತ ಬಂದ.

೧) ಪಾಲಾಕ್ಷ ೨) ಅಂಗುಲೀಮಾಲ ೩) ಏಕಾಕ್ಷ ೪) ಬಲಿದಾಸ

3) ವೆಂಕಣ್ಣನಿಗೆ ಸಹಾಯ ಮಾಡಿದ ಹೆಡ್‌ಮೇಷ್ಟ್ರು.

೧) ರಂಗಣ್ಣ ೨) ವೆಂಕಟಸುಬ್ಬಯ್ಯ

೩) ಪರಂಗಿ ಟೋಪಿ ಸಾಹೇಬ ೪) ಸುಬ್ಬಯ್ಯ

4) ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದ ವರ್ಷ.

೧) 1956 ೨) 1952. ೩) 1947. ೪) 1980.

5) ಪಶುಲೋಮ ನಿಂತಿದ್ದು.

೧)ಮರದ ಮೇಲೆ. ೨) ಹಾವಿನ ಮೇಲೆ ೩) ಹುತ್ತದ ಮೇಲೆ ೪) ಹಗ್ಗದ ಮೇಲೆ

6) ಮೊಲವು ಬಾವಿಯಲ್ಲಿ ಇದನ್ನು ಕಂಡಿತು.

೧) ಸಿಂಹವನ್ನು ೨) ಆನೆಯನ್ನು

೩) ತನ್ನ ಬಿಂಬವನ್ನು ೪) ನರಿಯನ್ನು

7) ನೋವು ಪಡುವಾಗ ಇದನ್ನು ಬಿಗಿ ಹಿಡಿದಿರಬೇಕು:

೧) ಕಣ್ಣನ್ನು ೨) ಕಿವಿಯನ್ನು ೩) ತುಟಿಯನ್ನು ೪) ಮೂಗನ್ನು

8) ಯಕ್ಷನ ರೂಪದಲ್ಲಿ ಬಂದವರು :

೧) ಧರ್ಮರಾಜ ೨) ಯಮ ೩) ಇಂದ್ರ ೪) ಅಗ್ನಿ.

9) ಲೋಕದಲ್ಲಿ ಬೆಲೆಯಾದದ್ದು :

೧) ಚಿನ್ನ ೨) ಮಣ್ಣು ೩) ಹೆತ್ತತಾಯಿ ೪) ಹೊತ್ತನಾಡು

10) ಅಕ್ಕಮಹಾದೇವಿಯ ಆರಾಧ್ಯ ದೈವ.

೧) ಬಸವಣ್ಣ ೨) ಅಲ್ಲಮಪ್ರಭು ೩) ಚನ್ನಮಲ್ಲಿಕಾರ್ಜುನ ೪) ಗುಹೇಶ್ವರ

11) ಉರಗಪತಾಕ ಇವನು.

೧) ಕರ್ಣ ೨) ಕಳಿಂಗ

೩) ದುಶ್ಯಾಸನ ೪) ದುರ್ಯೋಧನ

12) ಬನವಾಸಿಯಲ್ಲಿ ಮರಿದುಂಬಿಯಾಗಿ ಹುಟ್ಟಲು ಬಯಸಿದ ಕವಿ :

೧) ರನ್ನ ೨) ಜನ್ನ

೩) ಪಂಪ ೪) ರಾಘವಾಂಕ

13) ಕವಿರಾಜ ಮಾರ್ಗದ ಕರ್ತೃ :

೧) ನಂಜುಂಡಕವಿ ೨) ನಾಗವರ್ಮ. ೩) ನೃಪತುಂಗ. ೪) ಕೇಶಿರಾಜ.

14) ಕನ್ನಡ ನಾಡು ಹಬ್ಬಿರುವುದು ಇಲ್ಲಿಂದ ಇಲ್ಲಿಗೆ.

೧) ಕಾವೇರಿಯಿಂದ–ಗೋದಾವರಿವರೆಗೆ ೨) ಕಾವೇರಿಯಿಂದ–ಕನ್ಯಾಕುಮಾರಿವರೆಗೆ

೩) ಕಾವೇರಿಯಿಂದ–ಕೃಷ್ಣಾನದಿವರೆಗೆ ೪) ಭೀಮಾನದಿಯಿಂದ – ಕಾವೇರಿವರೆಗೆ

VII. ಕೆಳಗಿನ ಪ್ರಶ್ನೆಗಳಿಗೆ ೫–೬ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 3*6=18

1) ಆಂಗ್ಲಭಾಷೆ ವಿಶ್ವ ವ್ಯಾಪಿಯಾಗಲು ಕಾರಣವೇನು ?

2) ಮೇಷ್ಟ್ರು ತನ್ನ ಹೆಂಡತಿಯ ಬಗೆಗೆ ಹೇಳಿದ ಮಾತುಗಳನ್ನು ಸಂಗ್ರಹವಾಗಿ ಬರೆಯಿರಿ.

3) ಸಂದರ್ಭದೊಂದಿಗೆ ವಿವರಿಸಿ.

ನಾ ಪೇಳ್ವ ಕಜ್ಜವದು ಸಾಧ್ಯವೇ ನಿನಗೆ ?

ಅಥವಾ

ನಮ್ಮೆಲ್ಲರ ವಿಪತ್ತುಗಳೆಲ್ಲವೂ ಈಗ ತೊಲಗಿದವು.

4) ಸರ್ವಜ್ಞನಾಗಲು ಏನನ್ನು ಮಾಡಬೇಕು ?

5) ಲಕ್ಷ್ಮೀಧರಾಮಾತ್ಯನ ಶಾಸನ ಸೂಚಿಸಿರುವ ಲೋಕೋಪಕಾರಿ ಕಾರ್ಯಗಳಾವುವು ?

6) ಸಂದರ್ಭದೊಂದಿಗೆ ವಿವರಿಸಿ.

ನೀರು ಕುಡಿದು ವಿತಾಳಿಸಿದರು.

ಅಥವಾ

ಬಂಗಾರ ಮೋರೆ ತೊಳೆದೇನ.

VIII. ಕೆಳಗಿನ ಪ್ರಶ್ನೆಗಳಿಗೆ ೮–೧೦ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4*2=8

1) ವಿಧಾನ ಸೌಧ ನಿರ್ಮಾಣದ ಹಿನ್ನೆಲೆಯನ್ನು ವಿವರಿಸಿ.

ಅಥವಾ

ಮೊಲವು ಸಿಂಹವನ್ನು ಹೇಗೆ ಕೊಂದಿತು ?ವಿವರಿಸಿ.

2) ಅಜಗಣ್ಣನ ಯೋಗದ ಬಗೆಗೆ ಮುಕ್ತಾಯಕ್ಕನ ಅಭಿಪ್ರಾಯವೇನು ?

ಅಥವಾ

ಭೀಮ ಮತ್ತು ದುರ್ಯೋಧನರು ಪರಸ್ಪರ ಹೊಡೆದಾಡಿದ ಸನ್ನಿವೇಶವನ್ನು ಅದರ ಪರಿಣಾಮವನ್ನು ವಿವರಿಸಿ.

*********